# ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** : (102) 52

**ಸದಸ್ಯರ ಹೆಸರು** : ಶ್ರೀ ಕೇಶವ ಪ್ರಸಾದ್. ಎಸ್ (ವಿಧಾನ ಸಭಾ ಕ್ಷೇತ್ರ)

**ಉತ್ತರಿಸಬೇಕಾದ ದಿನಾಂಕ** : 08.12.2025

**ಉತ್ತರಿಸುವವರು** : ಅರಣ್ಯ ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಅರಣ್ಯದಂಚಿನ ಹೊಲಗದ್ದೆಗಳಲ್ಲಿ ಬೆಳೆದ ಬೆಳೆಗಳನ್ನು ಕಾಡುಪ್ರಾಣಿಗಳು ನಾಶ ಮಾಡುತ್ತಿರುವುದರಿಂದ. ರೈತರಿಗೆ ನಷ್ಟ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಬಂದಿದ್ದಲ್ಲಿ ಇದ್ದಕ್ಕೆ ಶಾಶ್ವತ ಪರಿಹಾರನ್ನು ಕಂಡುಹಿಡಿಯಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು: (ವಿವರ ನೀಡುವುದು): | ಹೌದು, ಸರ್ಕಾರದ ಗಮನಕ್ಕೆ ಬಂದಿರುತ್ತದೆ.<br><br>ಅರಣ್ಯದಂಚಿನ ಹೊಲ-ಗದ್ದೆಗಳಲ್ಲಿ ಬೆಳೆದ ಬೆಳೆಗಳನ್ನು ವನ್ಯಪ್ರಾಣಿಗಳಿಂದ ರಕ್ಷಿಸಲು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.<br><br>**ಭೌತಿಕ ಅಡೆತಡೆಗಳ ನಿರ್ಮಾಣ:**<br>• ಕಾಡಾನೆಗಳು ಅರಣ್ಯ ಪ್ರದೇಶದಿಂದ ಹೊರಗೆ ಬಾರದಂತೆ ತಡೆಗಟ್ಟಲು ಅರಣ್ಯದಂಚಿನಲ್ಲಿ ಸೌರಶಕ್ತಿ ಬೇಲಿ ನಿರ್ಮಾಣ/ನಿರ್ವಹಣೆ, ಆನೆತಡೆ ಕಂದಕ ನಿರ್ಮಾಣ/ನಿರ್ವಹಣೆ ಮಾಡಲಾಗಿದ್ದು ಮತ್ತು ರೈಲ್ವೆ ಹಳಿಗಳನ್ನು ಉಪಯೋಗಿಸಿ ಬ್ಯಾರಿಕೇಡ್ ನಿರ್ಮಿಸುವ ಕಾಮಗಾರಿಯನ್ನು ಕೈಗೊಳ್ಳಲಾಗಿದೆ.<br>• ರಾಜ್ಯದಲ್ಲಿ ಮಾನವ-ಆನೆ ಸಂಘರ್ಷ ಹೆಚ್ಚಾಗಿರುವ ಪ್ರದೇಶಗಳಲ್ಲಿ ಕಾಡಾನೆಗಳು ಅರಣ್ಯ ಪ್ರದೇಶದಿಂದ ಹೊರಗೆ ಬಾರದಂತೆ ನಿಯಂತ್ರಿಸಲು ಉಪಯೋಗಿಸಿದ ರೈಲ್ವೆ ಹಳಿಗಳನ್ನು ಉಪಯೋಗಿಸಿಕೊಂಡು ರೈಲ್ವೆ ಬ್ಯಾರಿಕೇಡ್ ಕಾಮಗಾರಿಯನ್ನು ಕೈಗೊಳ್ಳಲಾಗುತ್ತಿದ್ದು, ಒಟ್ಟು.428 ಕಿ.ಮೀ ರೈಲ್ವೆ ಬ್ಯಾರಿಕೇಡ್ ನಿರ್ಮಿಸಲಾಗಿದೆ.<br><br>**ಆನೆ ಕಾರ್ಯಪಡೆಗಳ ಸ್ಥಾಪನೆ:**<br>• ಸರ್ಕಾರವು ದಿನಾಂಕ:21.11.2022 ರ ಆದೇಶದಲ್ಲಿ ಹಾಸನ, ಚಿಕ್ಕಮಗಳೂರು, ಮೈಸೂರು ಮತ್ತು ಕೊಡಗು ಜಿಲ್ಲೆಗಳಲ್ಲಿ ಹಾಗೂ ದಿನಾಂಕ:01.02.2023ರ ಆದೇಶದಲ್ಲಿ ಚಾಮರಾಜನಗರ ಜಿಲ್ಲೆ, ದಿನಾಂಕ:30.06.2023 ರ ಆದೇಶದಲ್ಲಿ ರಾಮನಗರ ಹಾಗೂ ಬೆಂಗಳೂರು ಜಿಲ್ಲೆಗಳಲ್ಲಿ ಮತ್ತು ದಿನಾಂಕ:18.05.2024 ರ ಆದೇಶದಲ್ಲಿ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದಲ್ಲಿ ಕಾಡಾನೆ ಹಾವಳಿಯನ್ನು ತಡೆಗಟ್ಟಲು ಪ್ರತಿ ಜಿಲ್ಲೆಗೊಂದರಂತೆ ಅಧಿಕಾರಿ / ಸಿಬ್ಬಂದಿಗಳನ್ನೊಳಗೊಂಡ 08 ಆನೆ ಕಾರ್ಯಪಡೆ (Elephant Task Force) ನ್ನು ರಚಿಸಲಾಗಿರುತ್ತದೆ.<br>• ರಾಜ್ಯದಲ್ಲಿ ಮಾನವ- ಆನೆ ಸಂಘರ್ಷ ಉಂಟಾಗುವ ಸಂದರ್ಭಗಳಲ್ಲಿ ಕಾಡಾನೆಗಳನ್ನು ಸೆರೆಹಿಡಿಯುವ ಕಾರ್ಯಾಚರಣೆಗಾಗಿ ದುಬಾರೆ, ಮತ್ತಿಗೋಡು, ಬಳ್ಳೆ, ಹಾರಂಗಿ, ಭೀಮನಕಟ್ಟೆ ಮತ್ತು ರಾಮಾಪುರ ಆನೆ ಶಿಬಿರಗಳಲ್ಲಿನ ಪಳಗಿದ ಆನೆಗಳನ್ನು ಬಳಸಿಕೊಂಡು ನುರಿತ |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| | | ಪಶು ವೈದ್ಯಾಧಿಕಾರಿ, ಮಾವುತ ಹಾಗೂ ಇತರೆ ಸಿಬ್ಬಂದಿಗಳೊಳಗೊಂಡ ಮೂರು ತಂಡಗಳನ್ನು ರಚಿಸಲಾಗಿರುತ್ತದೆ. ಸದರಿ ತಂಡವು ರಾಜ್ಯದ ಯಾವುದೇ ಭಾಗದಿಂದ ಕಾಡಾನೆ ಸೆರೆಹಿಡಿಯುವ ಕಾರ್ಯಾಚರಣೆಗೆ ಬೇಡಿಕೆ ಬಂದಾಗ ಈ ತಂಡಗಳಲ್ಲಿ ಒಂದ ತಂಡವನ್ನು ಕಾರ್ಯಾಚರಣೆಗೆ ನಿಯೋಜಿಸಲಾಗುತ್ತಿದೆ.<br>**ಆವಾಸ ಸ್ಥಾನ ಅಭಿವೃದ್ಧಿ:**<br>• ಅರಣ್ಯ ಪ್ರದೇಶಗಳಲ್ಲಿ ಹುಲ್ಲುಗಾವಲು ಸಂರಕ್ಷಣೆ ಹಾಗೂ ಅಭಿವೃದ್ಧಿಗೊಳಿಸಲು ಹೆಚ್ಚಿನ ಅರಣ್ಯ ಪ್ರದೇಶಗಳಲ್ಲಿ ದಟ್ಟವಾಗಿ ಬೆಳೆದ ಲಂಟಾನ ಮತ್ತು ಯುಪಟೋರಿಯಂ ಕಳೆಗಳಿಂದಾಗಿ ಹುಲ್ಲಿನ ಬೆಳವಣಿಗೆಗೆ ತೀವ್ರ ಅಡಚಣೆಯಾಗಿ ಅರಣ್ಯದಲ್ಲಿ ಹುಲ್ಲಿನ ಲಭ್ಯತೆ ಗಣನೀಯವಾಗಿ ಕಡಿಮೆಯಾಗಿರುವುದರಿಂದ ಹುಲ್ಲು ಬೆಳೆಯುವ ಪ್ರದೇಶಗಳಲ್ಲಿ ಬೆಳೆದಿರುವ ಲಂಟಾನ ಮತ್ತು ಯುಪಟೋರಿಯಂ ಕಳೆಗಳನ್ನು ಕಿತ್ತು ಸ್ವಚ್ಛಗೊಳಿಸಿ ಅರಣ್ಯಕ್ಕೆ ಪೂರಕವಾದ ಹುಲ್ಲು ಬೆಳೆಯಲು ಅನುವು ಮಾಡಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ.<br>• ಆನೆಗಳು ಮತ್ತು ಇತರೆ ವನ್ಯಪ್ರಾಣಿಗಳು ಒಂದು ಅರಣ್ಯ ಪ್ರದೇಶದಿಂದ ಇನ್ನೊಂದು ಅರಣ್ಯ ಪ್ರದೇಶಕ್ಕೆ ಅಡೆತಡೆ ಇರದಂತೆ ಸಂಚರಿಸಲು ಅನುಕೂಲವಾಗುವಂತೆ ವನ್ಯಜೀವಿ ಕಾರಿಡಾರ್ (Wildlife Corridor) ಅನುಷ್ಠಾನಗೊಳಿಸಬೇಕಾಗಿರುತ್ತದೆ, ಇದಕ್ಕಾಗಿ ತಯಾರಿಸಿರುವ ವನ್ಯಜೀವಿ ಕಾರಿಡಾರ್ (Wildlife Corridor) ಪಾಲಿಸಿಯ ಪ್ರಸ್ತಾವನೆಯು ಪರಿಶೀಲನೆಯಲ್ಲಿರುತ್ತದೆ.<br>**ತ್ವರಿತ ಕಾರ್ಯಾಚರಣೆ:**<br>• ಆನೆ ಕಾರ್ಯಪಡೆ (ETF) ಮತ್ತು ಚಿರತೆ ಕಾರ್ಯಪಡೆ (LTF) ಗಳಿಗೆ 24X7 ಕಾರ್ಯ ನಿರ್ವಹಿಸಲು ನಿಯಂತ್ರಣ ಕೊಠಡಿಯನ್ನು ಸ್ಥಾಪಿಸಿದ್ದು, ನಿಯಂತ್ರಣ ಕೊಠಡಿಗೆ ಬರುವ ಕರೆಗಳಿಗೆ ಸ್ಪಂದಿಸಿ ಕೂಡಲೇ ಕ್ರಮವಹಿಸಲಾಗುತ್ತಿದೆ.<br>• ಚಿರತೆ / ಹುಲಿ ಹಾವಳಿ ಹೆಚ್ಚಾಗಿರುವ ಸೂಕ್ಷ್ಮ ಪ್ರದೇಶಗಳಲ್ಲಿ ಬೋನುಗಳನ್ನು ಇರಿಸಿ ಸೆರೆ ಹಿಡಿದು, ಸೂಕ್ತ ಆವಾಸಸ್ಥಾನಕ್ಕೆ ಸ್ಥಳಾಂತರಿಸಲು ಕ್ರಮವಹಿಸಲಾಗುತ್ತಿದೆ.<br>• ಕಾಡಾನೆ ಹಾವಳಿ ತುರ್ತು ನಿರ್ವಹಣೆಗಾಗಿ ಕ್ಷಿಪ್ರ ಕಾರ್ಯಪಡೆ ತಂಡಗಳನ್ನು (RRT) ರಚಿಸಿ ನಿರ್ವಹಿಸಲಾಗುತ್ತಿದೆ.<br>• ಕಾಡಾನೆ ಹಿಮ್ಮೆಟ್ಟಿಸುವ ತಂಡಗಳನ್ನು ರಚಿಸಿ ಕಾಡಾನೆಗಳನ್ನು ಕಾಡಿಗೆ ಹಿಮ್ಮೆಟ್ಟಿಸುವ ಕಾರ್ಯ ಕೈಗೊಳ್ಳಲಾಗುತ್ತಿದೆ.<br>• ನಿಸ್ತಂತು ಜಾಲದ ಮೂಲಕ ಮಾಹಿತಿ ಸಂವಹನ ಮಾಡಲಾಗುತ್ತಿದೆ.<br>• ಕಾಡಾನೆಗಳ ಮಾಹಿತಿಯನ್ನು ಸಂಗ್ರಹಿಸಲು 24 ಗಂಟೆ ಕಾರ್ಯನಿರ್ವಹಿಸುವ ಮಾಹಿತಿ ಕೇಂದ್ರ ಸ್ಥಾಪಿಸಲಾಗಿದೆ.<br>• ಕಾಡಾನೆ ಗುಂಪಿನಲ್ಲಿದ್ದ ವಯಸ್ಕ ಹೆಣ್ಣಾನೆಯನ್ನು ಗುರುತಿಸಿ ಅದಕ್ಕೆ ರೇಡಿಯೋ ಕಾಲರ್ ಅಳವಡಿಸಿ ಆನೆಗಳ ಚಲನ-ವಲನಗಳ ಬಗ್ಗೆ ಎಸ್.ಎಂ.ಎಸ್. ಹಾಗೂ ವಾಟ್ಸಾಪ್ |

| ಕ್ರ.ಸಂ | ಪ್ರಶ್ನೆ | ಉತ್ತರ |
| --- | --- | --- |
| | | ಮೂಲಕ ಜನರಿಗೆ ಮಾಹಿತಿಯನ್ನು ನೀಡಿ ಮಾನವ ಪ್ರಾಣಹಾನಿ ಹಾಗೂ ಮಾನವ ಗಾಯ ತಪ್ಪಿಸಲು ಕ್ರಮ ವಹಿಸಲಾಗುತ್ತಿದೆ.<br>• ಸಾರ್ವಜನಿಕರಿಗೆ ಉಪಟಳ ನೀಡುತ್ತಿರುವ ಪುಂಡಾನೆಗಳನ್ನು ಗುರುತಿಸಿ, ಸೆರೆಹಿಡಿದು ಆಗ್ಗಿಂದಾಗ್ಗೆ ಆನೆ ಶಿಬಿರಗಳಿಗೆ ಸ್ಥಳಾಂತರಿಸಲಾಗಿದೆ.<br>• ವನ್ಯಪ್ರಾಣಿಗಳ ಹಾವಳಿ ಹೆಚ್ಚಾಗಿರುವ ಪ್ರದೇಶಗಳಲ್ಲಿ ಈಗಾಗಲೇ ರಚಿಸಿರುವ RRT, ADC, ಮತ್ತು ETF ಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ತಂಡಗಳನ್ನು ಒಟ್ಟುಗೂಡಿಸಿ ಮಾನವ-ವನ್ಯಜೀವಿ ಸಂಘರ್ಷ ಉಪ ತಂಡಗಳಾಗಿ ರಚಿಸಿ ಆಯ್ದ ಸ್ಥಳಗಳಲ್ಲಿ ನಿಯೋಜಿಸಲಾಗಿದೆ.<br>• ಸರ್ಕಾರದ ಆದೇಶ ಸಂಖ್ಯೆ: ಅಪಜೀ 96 ಎಫ್.ಡಬ್ಲ್ಯು.ಎಲ್. 2016 ದಿನಾಂಕ: 01.10.2016 ರಲ್ಲಿ ಮಾನವ ಪ್ರಾಣಕ್ಕೆ ಅಥವಾ ಸ್ವತ್ತಿಗೆ ಅಪಾಯಕಾರಿಯಾಗಿರುವ ಹಾಗೂ ಬೆಳೆನಾಶ ಮಾಡುವ ಕಾಡು ಹಂದಿಗಳನ್ನು ಷರತ್ತುಬದ್ಧವಾಗಿ ಕೊಲ್ಲಲು ಅನುಮತಿ ನೀಡುವ ಬಗ್ಗೆ ಆದೇಶಿಸಲಾಗಿದೆ.<br><br>**ಅರಿವು ಮೂಡಿಸಲು:**<br>• ಕಾಡಾನೆಗಳ ಹಾವಳಿ ಹೆಚ್ಚಾಗಿರುವ ಪ್ರದೇಶದಲ್ಲಿ ಜನ ಸಂಪರ್ಕ ಸಭೆಯನ್ನು ಕರೆದು ಜನರಲ್ಲಿ ಅರಿವು ಮೂಡಿಸಲಾಗುತ್ತಿದೆ.<br>• ಶಾಲಾಮಕ್ಕಳಿಗೆ ಅರಿವು ಮೂಡಿಸಲು "ಚಿಣ್ಣರ ವನದರ್ಶನ" ಕಾರ್ಯಕ್ರಮ ಕೈಗೊಳ್ಳಲಾಗುತ್ತಿದೆ.<br><br>**ಸಹಾಯ ಧನ:**<br>• ರೈತರಿಗೆ ಸಬ್ಸಿಡಿ ದರದಲ್ಲಿ ಸೋಲಾರ್ ಬೇಲಿ ನಿರ್ಮಾಣ ಮಾಡಲು ಉತ್ತೇಜನ ನೀಡಲಾಗುತ್ತಿದೆ ಹಾಗೂ ಅರಣ್ಯದ ಅಂಚಿನಲ್ಲಿ ಬರುವ ಖಾಸಗಿ ಜಮೀನುಗಳ ಸುತ್ತಾ ಸರಕಾರದ ವತಿಯಿಂದ ದೊರಕುವ ಶೇ. 50 ಸಬ್ಸಿಡಿಯನ್ನು ಬಳಸಿಕೊಂಡು ಸೌರಶಕ್ತಿ ಬೇಲಿಯನ್ನು ನಿರ್ಮಿಸಲಾಗುತ್ತಿದೆ.<br>• ರಕ್ಷಿತ ಅರಣ್ಯ ಪ್ರದೇಶಗಳ ಕಾಡಂಚಿನ ಆಯ್ದ ಗ್ರಾಮಗಳಿಗೆ ಎಲ್ ಪಿ ಜಿ ಗ್ಯಾಸ್, ಸೋಲಾರ್ ದೀಪಗಳನ್ನು ಇಲಾಖೆಯ ವತಿಯಿಂದ ನೀಡಲಾಗುತ್ತಿದೆ.<br>• ರಕ್ಷಿತ ಅರಣ್ಯ ಪ್ರದೇಶಗಳ ಕಾಡಂಚಿನ ಆಯ್ದ ಗ್ರಾಮಗಳಿಗೆ Cattle Shed ನಿರ್ಮಾಣ ಮಾಡಲು ಸಹಾಯ ಮಾಡಲಾಗುತ್ತಿದೆ.<br><br>**ತಂತ್ರಜ್ಞಾನ ಬಳಕೆ:**<br><br>• ಮಾನವ- ಆನೆ ಸಂಘರ್ಷ ಹೆಚ್ಚಿರುವ 10 ಜಿಲ್ಲೆಗಳಲ್ಲಿ **"ಆನೆ ಎಲ್ಲಿ"** ಎಂಬ ತಂತ್ರಜ್ಞಾನ ವ್ಯವಸ್ಥೆಯನ್ನು ಜಾರಿಗೆ ತರಲಾಗಿದೆ. ಈ ವ್ಯವಸ್ಥೆಯು ಸಾರ್ವಜನಿಕ ದೂರುಗಳು, ಗಸ್ತು ತಿರುಗುವಿಕೆ ಮುಂತಾದ ವಿವಿಧ ಮಾಹಿತಿಗಳ ಮೂಲಕ ಒಂದು ಪ್ರದೇಶದಲ್ಲಿ ಆನೆಗಳ ಚಲನವಲನವನ್ನು ಮೇಲ್ವಿಚಾರಣೆ ಮಾಡುತ್ತದೆ. ಈ ಮಾಹಿತಿಯು ಆನೆಗಳ ಚಲನವಲನದ ಮಾದರಿಯನ್ನು ಪತ್ತೆಹಚ್ಚಲು ಮತ್ತು ಸಾರ್ವಜನಿಕರಿಗೆ ಮುಂಚಿನ ಎಚ್ಚರಿಕೆ ಸಂದೇಶಗಳನ್ನು |

| ಕ್ರ.ಸಂ | ಪ್ರಶ್ನೆ | ಉತ್ತರ |
| --- | --- | --- |
| | | ಕಳುಹಿಸಲು ಸಹಾಯ ಮಾಡುತ್ತಿದೆ. ಮುಂದುವರೆದು, ವಿವಿಧ ವಿಭಾಗಗಳಿಂದ ಲಭ್ಯವಾಗುವ ಮಾಹಿತಿಯನ್ನು ರಿಯಲ್-ಟೈಮ್‌ನಲ್ಲಿ ಸಂಗ್ರಹಿಸಿ, ವಿಶ್ಲೇಷಿಸಿ, ಸೂಕ್ತ ನಿರ್ಧಾರಗಳನ್ನು ಕೈಗೊಳ್ಳಲು ಹಾಗೂ ಕ್ಷೇತ್ರ ಮಟ್ಟದ ಚಟುವಟಿಕೆಗಳನ್ನು ಸಮನ್ವಯಗೊಳಿಸಲು, ಕೇಂದ್ರ ಸ್ಥಾನದಲ್ಲಿ **ಸಂಯೋಜಿತ ಕಮಾಂಡ್ ಅಂಡ್ ಕಂಟ್ರೋಲ್ ಸೆಂಟರ್(ICCC)** ಹಾಗೂ 11 ವಿಭಾಗಗಳಲ್ಲಿ **ವಿಭಾಗೀಯ ಕಮಾಂಡ್ ಅಂಡ್ ಕಂಟ್ರೋಲ್ ಸೆಂಟರ್(DCCC)** ಸ್ಥಾಪಿಸಲಾಗುತ್ತಿದೆ.<br>• ರೇಡಿಯೋ ಕಾಲರ್ ಅಳವಡಿಸಿರುವ ಕಾಡಾನೆ, ಹುಲಿ, ಚಿರತೆಗಳ ಚಲನ-ವಲನಗಳನ್ನು ದಿನನಿತ್ಯ ಗಮನಿಸಲು ಇಲಾಖಾವತಿಯಿಂದ "ಹೆಜ್ಜೆ" ಎಂಬ ಡ್ಯಾಶ್ ಬೋರ್ಡ್ ನ್ನು ತಯಾರಿಸಲಾಗಿದೆ.<br>• ಕಾಡಂಚಿನ ಗ್ರಾಮಗಳಲ್ಲಿ ವನ್ಯಪ್ರಾಣಿಗಳು ಬಂದಂತಹ ಸಂದರ್ಭಗಳಲ್ಲಿ ಸಾರ್ವಜನಿಕರಿಗೆ ಎಚ್ಚರಿಕೆ/ ಮಾಹಿತಿ ನೀಡಲು Advance alert system ಅನ್ನು ತಯಾರಿಸಲಾಗಿದೆ. ಇದರಿಂದಾಗಿ ಸಾರ್ವಜನಿಕರಿಗೆ ನೇರವಾಗಿ ಸಂದೇಶಗಳನ್ನು ಕಳುಹಿಸಲಾಗುತ್ತಿದೆ.<br>• ಕಾಡಾನೆ ಇರುವ ಪ್ರದೇಶಗಳಲ್ಲಿ ಸಾರ್ವಜನಿಕರಿಗೆ ಎಚ್ಚರಿಕೆ/ ಮಾಹಿತಿ ನೀಡಲು ಡಿಜಿಟಲ್ ಬೋರ್ಡ್‌ಗಳನ್ನು ಅಳವಡಿಸಲಾಗಿದೆ.<br>• ಅರಣ್ಯದಂಚಿನ ಆಯ್ದ ಪ್ರದೇಶಗಳಲ್ಲಿ "**AI**" Based Camera ಗಳನ್ನು ಅಳವಡಿಸಲಾಗಿದ್ದು, ವನ್ಯಪ್ರಾಣಿಗಳ ಚಲನ-ವಲನಗಳನ್ನು ಗಮನಿಸಲಾಗುತ್ತಿದೆ.<br>• ಡ್ರೋನ್‌ಗಳ ಮುಖಾಂತರ ವನ್ಯಪ್ರಾಣಿಗಳ ಚಲನ-ವಲನಗಳನ್ನು ಗಮನಿಸಲಾಗುತ್ತಿದೆ. |
| ಆ) | ಕಳೆದ 3 ವರ್ಷಗಳಲ್ಲಿ ವಿವಿಧ ಜಿಲ್ಲೆಗಳಲ್ಲಿ ಕಾಡುಪ್ರಾಣಿಗಳ ಹಾವಳಿಯಿಂದ ಎಷ್ಟು ಎಕರೆ ಬೆಳೆ ಹಾನಿಯಾಗಿದೆ; ಯಾವ ಯಾವ ಬೆಳೆ ಹಾನಿಯಾಗಿದೆ; ಸದರಿ ಹಾನಿಗಳಿಗೆ ಸರ್ಕಾರದಿಂದ ವಿತರಿಸಲಾದ ಪರಿಹಾರವೆಷ್ಟು; (ತಾಲ್ಲೂಕುವಾರು ಮಾಹಿತಿ ನೀಡುವುದು): | ವನ್ಯಪ್ರಾಣಿಗಳ ಹಾವಳಿಯಿಂದ ಉಂಟಾಗುವ ಬೆಳೆನಷ್ಟಗಳಿಗೆ ಸರ್ಕಾರದ ಆದೇಶ ಸಂಖ್ಯೆ: ಅಪಜೀ 156 ಎಫ್ ಡಬ್ಲ್ಯೂಎಲ್ 2022, ಬೆಂಗಳೂರು ದಿನಾಂಕ:18-01-2023ರಲ್ಲಿ ನಿಗಧಿಪಡಿಸಿದ ದರಗಳನ್ವಯ ಪ್ರತೀ ಕ್ವಿಂಟಾಲ್/ ಗಿಡ/ ಕೆಜಿ ಗಳನ್ವಯ ಪರಿಹಾರ ಧನ ಪಾವತಿಸಲಾಗುತ್ತದೆ. ಆದುದರಿಂದ ವನ್ಯಪ್ರಾಣಿಗಳಿಂದ ಹಾನಿಗೊಳಗಾದ ಬೆಳೆನಷ್ಟ ಪ್ರಕರಣಗಳನ್ನು ಸಂಖ್ಯೆಯಲ್ಲಿ ನಮೂದಿಸಲಾಗುತ್ತಿದೆ. ಪ್ರಸ್ತುತ ಕಳೆದ ಮೂರು ವರ್ಷಗಳಲ್ಲಿ ಬೆಳೆನಷ್ಟವಾದ ಪ್ರಕರಣಗಳು ಹಾಗೂ ಪಾವತಿಸಿರುವ ಅನುದಾನ ವಿವರ ವಿವರ **ಅನುಬಂಧ-01ರಲ್ಲಿ** ಒದಗಿಸಿದೆ.<br><br>ಹಾನಿಯಾದ ಬೆಳೆಗಳ ವಿವರ ಈ ಕೆಳಕಂಡಂತಿದೆ.<br><br>ಅರೇಬಿಯನ್ ಮಲ್ಲಿಗೆ (ಚೆಂಡುಮಲ್ಲಿಗೆ), ಅಡಿಕೆ, ತೊಗರಿಬೇಳೆ, ಅವರೆ, ಬಾಳೆಹಣ್ಣು, ಬೀನ್ಸ್, ಬೀಟ್ರೂಟ್, ಹಾಗಲಕಾಯಿ, ಉದ್ದಿನಬೇಳೆ, ಕರಿಮೆಣಸು, ಬದನೆಕಾಯಿ, ಎಲೆಕೋಸು, ಏಲಕ್ಕಿ, ಕ್ಯಾರೆಟ್, ಹೂಕೋಸು, ಸೇವಂತಿಹೂವು, ಕಾಫಿ, ಕೊತ್ತಂಬರಿ, ಜೋಳ (ಮೆಕ್ಕೆಜೋಳ), ಹತ್ತಿ, ಗೋವಿನಜೋಳ (ಅಲ್ಸಂಡೆಕಾಳು), ಕನಕಾಂಬರ, ಸೀತಾಫಲ , ನುಗ್ಗೆಕಾಯಿ, ಮೆಂತ್ಯ ಸೊಪ್ಪು, ಅವರೆಕಾಯಿ, ನವಿಲು ಕೋಸು, ಶುಂಠಿ, ಹಸಿರುಮೆಣಸಿನಕಾಯಿ, |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| | | ಹೆಸರುಬೇಳೆ, ಕಡಲೆಕಾಯಿ, ಸೀಬೆಕಾಯಿ, ಹಲಸಂದೆ, ಹರಳು, ಹಿಪ್ಪುನೇರಳೆ, ಹಲಸು, ಜೋಳ, ಕಂಬು, ಬೆಂಡೆಕಾಯಿ, ನಿಂಬೆ, ಮಾವು, ನವಣೆ, ಈರುಳ್ಳಿ, ಕಿತ್ತಳೆ, ಪಡವಲಕಾಯಿ, ಭತ್ತ, ಬಟಾಣಿ, ದಾಳಿಂಬೆ, ಆಲೂಗಡ್ಡೆ, ಮೂಲಂಗಿ, ರಾಗಿ, ಹೀರೆಕಾಯಿ, ಸಜ್ಜೆ, ಸಪೋಟಾ, ಎಳ್ಳು, ಪಡವಳಕಾಯಿ, ಸೋಯಾ, ಕಬ್ಬು, ಸೂರ್ಯಕಾಂತಿ, ತೊಂಡೇಕಾಯಿ, ಟೊಮೆಟೋ, ಅರಿಶಿಣ, ಉಚ್ಚೆಳ್ಳು, ಕಲ್ಲಂಗಡಿ ಹಣ್ಣು. |
| ಇ) | ಸದರಿ ಜಿಲ್ಲೆಗಳಲ್ಲಿ ಕಾಡುಪ್ರಾಣಿಗಳ ಹಾವಳಿಯನ್ನು ತಡೆಗಟ್ಟಲು ಸರ್ಕಾರ ರೂಪಿಸಿರುವ ಯೋಜನೆಗಳು ಯಾವುವು: ಇದ್ದಕ್ಕಾಗಿ ಖರ್ಚು ಮಾಡಿರುವ ಅನುದಾನವೆಷ್ಟು? (ಜಿಲ್ಲಾವಾರು ಮಾಹಿತಿ ನೀಡುವುದು) | ವನ್ಯಪ್ರಾಣಿಗಳು ಅರಣ್ಯ ಪ್ರದೇಶದಿಂದ ಹೊರಗೆ ಬಾರದಂತೆ ತಡೆಗಟ್ಟಲು ಅರಣ್ಯದಂಚಿನಲ್ಲಿ ಸೌರಶಕ್ತಿ ಬೇಲಿ ನಿರ್ಮಾಣ/ನಿರ್ವಹಣೆ, ಆನೆತಡೆ ಕಂದಕ ನಿರ್ಮಾಣ/ನಿರ್ವಹಣೆ ಮಾಡಲಾಗಿದ್ದು ಮತ್ತು ರೈಲ್ವೆ ಹಳಿಗಳನ್ನು ಉಪಯೋಗಿಸಿ ಬ್ಯಾರಿಕೇಡ್ ನಿರ್ಮಿಸುವ ಕಾಮಗಾರಿಯನ್ನು ಕೈಗೊಳ್ಳಲಾಗಿದೆ.<br>ರಾಜ್ಯದಲ್ಲಿ ಮಾನವ-ಆನೆ ಸಂಘರ್ಷ ಹೆಚ್ಚಾಗಿರುವ ಪ್ರದೇಶಗಳಲ್ಲಿ ಕಾಡಾನೆಗಳು ಅರಣ್ಯ ಪ್ರದೇಶದಿಂದ ಹೊರಗೆ ಬಾರದಂತೆ ನಿಯಂತ್ರಿಸಲು ಉಪಯೋಗಿಸಿದ ರೈಲ್ವೆ ಹಳಿಗಳನ್ನು ಉಪಯೋಗಿಸಿಕೊಂಡು ರೈಲ್ವೆ ಬ್ಯಾರಿಕೇಡ್ ಕಾಮಗಾರಿಯನ್ನು ಕೈಗೊಳ್ಳಲಾಗುತ್ತಿದ್ದು, ಒಟ್ಟು.428 ಕಿ.ಮೀ ರೈಲ್ವೆ ಬ್ಯಾರಿಕೇಡ್ ನಿರ್ಮಿಸಲಾಗಿದೆ. ಮೇಲ್ಕಂಡ ಕಾಮಗಾರಿಗಳಿಗಾಗಿ ವಿವಿಧ ಲೆಕ್ಕಶೀರ್ಷಿಕೆಗಳಲ್ಲಿ ಭರಿಸಿರುವ ವೆಚ್ಚದ ವಿವರ **ಅನುಬಂಧ-02** ರಲ್ಲಿ ಒದಗಿಸಿದೆ. |

**ಅಪಜೀ 326 ಎಫ್‌ಡಬ್ಲ್ಯೂಎಲ್ 2025**

**(ಈಶ್ವರ ಬಿ. ಖಂಡ್ರೆ)**
**ಅರಣ್ಯ ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು**

# ಅನುಬಂಧ - 2

ವನ್ಯಪ್ರಾಣಿಗಳು ಅರಣ್ಯ ಪ್ರದೇಶದಿಂದ ಹೊರಗೆ ಬಾರದಂತೆ ತಡೆಗಟ್ಟಲು ಅರಣ್ಯದಂಚಿನಲ್ಲಿ ಸೌರಶಕ್ತಿ ಬೇಲಿ ನಿರ್ಮಾಣ/ನಿರ್ವಹಣೆ, ಆನೆತಡೆ ಕಂದಕ ನಿರ್ಮಾಣ/ನಿರ್ವಹಣೆ ಕಾಮಗಾರಿಗಳಿಗಾಗಿ 2023-24 / 2024-25 ಮತ್ತು 2025-26 ನೇ ಸಾಲಿನಲ್ಲಿ ದಿನಾಂಕ: 20.11.2025ರ ಅಂತ್ಯದವರೆಗೆ ವಿಭಾಗವಾರು ಭರಿಸಿರುವ ವೆಚ್ಚದ ವಿವರ ಈ ಕೆಳಕಂಡಂತಿದೆ

(ರೂ. ಲಕ್ಷಗಳಲ್ಲಿ)

| ಕ್ರ.ಸಂ | ವೃತ್ತ | ವಿಭಾಗ | 4406-01-101-0-01-MAC-139-Major Works ಲೆಕ್ಕ ಶೀರ್ಷಿಕೆಯಡಿ ಭರಿಸಲಾದ ವೆಚ್ಚ | | |
|---|---|---|---|---|---|
| | | | 2023-24 | 2024-25 | 2025-26 |
| 1 | Ballari | Ballari (T) | 6.14 | 4.00 | |
| 2 | | Chitradurga | 21.00 | 31.80 | 4.85 |
| 3 | | Davanagere (T) | 42.75 | 26.64 | 3.99 |
| 4 | | Koppala (T) | 11.00 | 24.00 | 4.17 |
| 5 | | Vijayanagar (T) | 50.18 | 24.39 | 8.42 |
| 6 | Belagavi | Bagalakote | 20.00 | 22.20 | 7.99 |
| 7 | | Belagavi(T) | 45.58 | 344.99 | 344.81 |
| 9 | | Gokak (T) | 20.00 | 3.00 | 8.30 |
| 10 | | Vijayapura (T) | 10.00 | 2.93 | 2.00 |
| 11 | Bengaluru | Bengaluru (R) | 9.99 | 20.00 | 3.80 |
| 12 | | Bengaluru (U) | 69.03 | 54.99 | 37.31 |
| 13 | | BNP WL | 199.99 | 439.83 | 91.94 |
| 14 | | C-ballapura(T) | 10.00 | - | |
| 15 | | Kolara (T) | 24.99 | 27.78 | 53.99 |
| 16 | | Ramanagar (T) | 176.01 | 171.82 | 32.97 |
| 17 | Canara | Haliyala (T) | 100.18 | 120.00 | 41.16 |
| 18 | | Honnavara | 50.00 | 6.88 | 15.00 |
| 19 | | Kali TR | 98.34 | 311.02 | 50.07 |
| 20 | | Karwar(T) | 50.00 | 17.46 | |
| 21 | | Sirsi | 89.50 | 55.00 | 43.00 |
| 22 | | Yellapura (T) | 97.12 | 123.00 | 12.08 |
| 23 | Chamarajnagar | BRT TR | 301.35 | 240.00 | 50.59 |
| 24 | | Cauvery WL | 347.98 | 309.90 | 45.37 |
| 26 | | M.M.Hills WL | 99.99 | 129.23 | 22.60 |
| 27 | Chikmagaluru | Bhadra PT | 167.50 | 105.00 | 25.09 |
| 28 | | Chikmagaluru(T) | 123.00 | 220.00 | 68.57 |
| 29 | | Koppa (T) | 50.00 | 50.00 | 9.16 |
| 30 | Dharwad | Dharwad (T) | 50.00 | 30.00 | 35.42 |
| 31 | | Gadag | 32.00 | 40.00 | 9.05 |
| 32 | | Haveri | 50.00 | 70.00 | 17.61 |
| 33 | Hassan | Hassan (T) | 408.40 | 475.00 | 134.50 |

| ಕ್ರ.ಸಂ | ವೃತ್ತ | ವಿಭಾಗ | 4406-01-101-0-01-MAC-139-Major Works ಲೆಕ್ಕ ಶೀರ್ಷಿಕೆಯಡಿ ಭರಿಸಲಾದ ವೆಚ್ಚ | | |
|---|---|---|---|---|---|
| | | | 2023-24 | 2024-25 | 2025-26 |
| 34 | | Tumkuru (T) | 50.00 | 35.00 | 4.50 |
| 35 | Kalaburgi | Bidar (T) | 121.00 | 110.00 | 12.98 |
| 36 | | Kalaburgi (T) | 50.00 | 32.07 | 15.55 |
| 37 | | Raichur (T) | | 10.00 | |
| 38 | | Yadagiri (T) | 9.94 | - | |
| 39 | Kodagu | Madikeri (T) | 247.00 | 382.10 | 14.53 |
| 40 | | Madikeri (WL) | 200.75 | 300.30 | 5.44 |
| 41 | | Nagarahole TR | 257.92 | 551.00 | 110.35 |
| 42 | | Virajpet (T) | 278.00 | 330.23 | 10.99 |
| 43 | Mangaluru | Karkala WL | 146.80 | 215.00 | 48.33 |
| 44 | | Kundapura (T) | 20.00 | 60.00 | 21.98 |
| 45 | | Mangaluru (T) | 249.81 | 146.28 | 33.09 |
| 46 | Mysuru | Bandipur TR | 251.28 | 360.74 | 102.53 |
| 47 | | Hunsur (T) | 50.00 | 63.50 | 20.02 |
| 48 | | Mandya (T) | 29.03 | 35.07 | 6.24 |
| 49 | | Mysuru (T) | 80.00 | 65.00 | 31.63 |
| 50 | | Mysuru (WL) | 82.97 | 88.40 | 17.30 |
| 51 | Shivamogga | Bhadravathi(T) | 105.51 | 132.71 | 22.98 |
| 52 | | Sagara (T) | 30.00 | 10.00 | 1.43 |
| 53 | | Shivamogga (T) | 92.63 | 24.45 | 4.28 |
| 54 | | Shivamogga(WL) | 50.00 | 75.29 | 13.12 |
| 55 | Mysore (ZAK) | Mysore (ZAK) | 708.47 | 249.98 | 8.44 |
| Total: | | | **5,943.13** | **6,777.97** | **1,689.52** |

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ(ವನ್ಯಜೀವಿ)
ಮತ್ತು ಮುಖ್ಯ ವನ್ಯಜೀವಿ ಪರಿಪಾಲಕರು
ಕರ್ನಾಟಕ, ಬೆಂಗಳೂರು.

ಅನುಬಂಧ - 2ಎ

ವನ್ಯಪ್ರಾಣಿಗಳು ಅರಣ್ಯ ಪ್ರದೇಶದಿಂದ ಹೊರಗೆ ಬಾರದಂತೆ ತಡೆಗಟ್ಟಲು ಅರಣ್ಯದಂಚಿನಲ್ಲಿ ರೈಲ್ವೆ ಹಳಿಗಳನ್ನು ಉಪಯೋಗಿಸಿ ಬ್ಯಾರಿಕೇಡ್ ನಿರ್ಮಿಸುವ ಕಾಮಗಾರಿಗಳಿಗಾಗಿ 2023-24 / 2024-25 / 2025-26 ನೇ ಸಾಲಿನಲ್ಲಿ ದಿನಾಂಕ: 20.11.2025ರ ಅಂತ್ಯದವರೆಗೆ ವಿಭಾಗವಾರು ಭರಿಸಿರುವ ವೆಚ್ಚದ ವಿವರ ಈ ಕೆಳಕಂಡಂತಿದೆ

(ರೂ. ಲಕ್ಷಗಳಲ್ಲಿ)

| ಕ್ರ.ಸಂ | ವೃತ್ತ | ವಿಭಾಗ | 4406-01-101-0-01-Rail Barricade-132-Capital Expenses | | | 4406-01-101-0-02-KFDF-Flexi Fund -139-Major Works |
|---|---|---|---|---|---|---|
| | | | 2023-24 | 2024-25 | 2025-26 | 2024-25 |
| 1 | Bengaluru | BNP WL | 791.38 | 949.93 | 478.71 | 1,000.00 |
| 2 | | Ramanagar (T) | 200.00 | 324.60 | - | 72.00 |
| 3 | Chamarajnagar | BRT TR | 849.89 | 49.98 | - | 1,120.75 |
| 4 | | Cauvery WL | 1,199.77 | 1,499.41 | 369.03 | 1,359.69 |
| 5 | | M.M.Hills WL | 562.69 | 100.00 | - | 369.15 |
| 6 | Chikmagaluru | Bhadra PT | 400.92 | 106.43 | - | - |
| 7 | Hassan | Hassan (T) | 2,041.66 | 620.00 | 50.00 | 449.95 |
| 8 | Kodagu | Madikeri (T) | 1,613.33 | 525.00 | - | 775.24 |
| 9 | | Nagarahole TR | 920.00 | 550.00 | 316.00 | 1,577.00 |
| 10 | Mysuru | Bandipur TR | 1,420.00 | 1,273.57 | 273.15 | 2,228.50 |
| Total: | | | **9,999.64** | **5,998.92** | **1,486.89** | **8,952.28** |

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ವನ್ಯಜೀವಿ) ಮತ್ತು ಮುಖ್ಯ ವನ್ಯಜೀವಿ
ಪರಿಪಾಲಕರು, ಕರ್ನಾಟಕ ಬೆಂಗಳೂರು